

# ನಕ್ಕುಬಿಡಿ



- ವಿಮಾನಯಾನ ಮಂತ್ರಿಗೆ 'ಬಂತಾ' ಒಂದು ಪತ್ರ ಬರೆದು ಕೇಳಿಕೊಂಡ. 'ಮಾನ್ಯರೇ ಪ್ರಸಕ್ತ ನವ ಮುಂಬಯಿಯಲ್ಲಿ ನಿರ್ಮಾಣವಾಗುತ್ತಿರುವ ವಿಮಾನ ನಿಲ್ದಾಣಕ್ಕೆ ಬಂತಾಕ್ರೂಝ್ ಎಂದು ಹೆಸರಿಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಏಕೆಂದರೆ ನನ್ನ ಸೋದರ 'ಸಂತಾ'ನ ಹೆಸರಲ್ಲಿ ಈಗಾಗಲೇ ಮುಂಬಯಿಯಲ್ಲಿ ಸಂತಾಕ್ರೂಝ್ ಎಂಬ ವಿಮಾನ ನಿಲ್ದಾಣವೊಂದಿದೆ!

- ಕೌಟುಂಬಿಕ ಸಲಹೆಗಾರ ಗುಂಡನ ವ್ಯಾಖ್ಯಾನ... ನೀವು ಸರಿಯಾದ ವ್ಯಕ್ತಿಯನ್ನು ವಿವಾಹವಾದರೆ ನಿತ್ಯವೂ ಪ್ರೇಮಿಗಳ ದಿನ, ಹೊಂದಿಕೆಯಾಗದ ವ್ಯಕ್ತಿಯನ್ನು ವಿವಾಹವಾದರೆ ನಿತ್ಯ ಹುತಾತ್ಮರ ದಿನ, ಆಲಸಿ ವ್ಯಕ್ತಿಯನ್ನು ವಿವಾಹವಾದರೆ ನಿತ್ಯ ನೌಕರರ ದಿನ, ಶ್ರೀಮಂತ ವ್ಯಕ್ತಿಯನ್ನು ವಿವಾಹವಾದರೆ ನಿತ್ಯ ಹೊಸವರ್ಷದ ದಿನ, ಅಪ್ರಬುದ್ಧ ವ್ಯಕ್ತಿಯನ್ನು ವಿವಾಹವಾದರೆ ನಿತ್ಯ ಮಕ್ಕಳ ದಿನ, ಸುಳ್ಳು/ಮೋಸಗಾರ ವ್ಯಕ್ತಿಯನ್ನು ವಿವಾಹವಾದರೆ ನಿತ್ಯ ಏಪ್ರಿಲ್ ಫೂಲ್ ದಿನ ಮತ್ತು ಯಾವುದೇ ಕಾರಣಕ್ಕೆ ನೀವು ಮದುವೆಯೇ ಆಗದೆ ಉಳಿದರೆ ನಿತ್ಯ ಸ್ವಾತಂತ್ರ್ಯ ದಿನ!

- ಕೈಕೆಯು ಧೃತರಾಷ್ಟ್ರನ ಮೂರನೇ ಮಡದಿ, ಆತ ಆಕೆಯನ್ನು ತುಂಬಾ ಪ್ರೀತಿಸುತ್ತಿದ್ದ. ಮಸ್ತಾನಿ ಬಾಜೀರಾಯನ ಎರಡನೇ ಪತ್ನಿ, ಆತ ಆಕೆಯನ್ನು ತುಂಬಾ ಪ್ರೀತಿಸುತ್ತಿದ್ದ. ಪದ್ಮಾವತಿ ರಾವಲ್ ರತನ್ ಸಿಂಹನ ಎರಡನೇ ಪತ್ನಿ, ಆತ ಆಕೆಯನ್ನು ತುಂಬಾ ಪ್ರೀತಿಸುತ್ತಿದ್ದ. ಮಮ್ತಾಜ್ ಶಹಜಹಾನ್‌ನ ಎಂಟನೇ ಮಡದಿ, ಆತ ಆಕೆಗಾಗಿ ತಾಜಮಹಲನ್ನೇ ನಿರ್ಮಿಸಿದ. ಯಾವುದೇ ಪತಿ ತನ್ನ ಮೊದಲ ಪತ್ನಿಯನ್ನು ಆಳವಾಗಿ ಪ್ರೀತಿಸಿಲ್ಲ ಎನ್ನುವುದನ್ನು ಚರಿತ್ರೆ ಸಾಬೀತು ಪಡಿಸುತ್ತದೆ. ಈ ವಿಚಾರವನ್ನು ನಿಮ್ಮ ಅರಿವಿಗಾಗಿ ಗುಂಡ ಇಲ್ಲಿ ವಿಷಾದಪಡಿಸಿದ್ದಾನೆಯೇ ಹೊರತು ಯಾರೂ ಮನೆಯಲ್ಲಿ ಚರ್ಚಿಸದಿರುವುದೊಳಿತು.

- ಪ್ರತಿ ಯಶಸ್ವಿ ಪುರುಷನ ಹಿಂದೆ ಓರ್ವ ಸ್ತ್ರೀ ಇದ್ದಾಳೆಯೆನ್ನುವುದು ಅಕ್ಷರಶಃ ನಿಜ. ಗುಂಡನ ಅನುಭವಾನುಸಾರ ಆಕೆ ಆತನನ್ನು ಅದೆಷ್ಟು ಸತಾಯಿಸುವಳೆಂದರೆ... ಆತ ಸೋಲೊಪ್ಪಿಕೊಂಡು ದುಃಖಿತನಾಗಿ ತನ್ನ ಕೆಲಸಕಾರ್ಯಗಳಲ್ಲಿ ಇನ್ನಿಲ್ಲದ ರೀತಿ ತೊಡಗಿಕೊಳ್ಳುತ್ತಾನೆ. ಯಶಸ್ಸು ಆಗ ಸ್ವಯಂ ಆತನನ್ನು ಹುಡುಕಿಕೊಂಡು ಬಂದು ಪಾದಗಳಿಗೆರಗುತ್ತದೆ!

- ನೀವು ನಿಮ್ಮದೇ ತಪ್ಪುಗಳಿಗಾಗಿ ನಕ್ಕು ಬಿಟ್ಟರೆ ನಿಮ್ಮ ಆಯುಷ್ಯ ವೃದ್ಧಿಸಬಹುದು. ಆದರೆ, ನೀವೆಂದಾದರೂ ನಿಮ್ಮ ಪತ್ನಿಯ ತಪ್ಪುಗಳಿಗಾಗಿ ನಕ್ಕು ಬಿಟ್ಟರೆ ನಿಮ್ಮ ಆಯುಷ್ಯ ಕಡಿತಗೊಳ್ಳಬಹುದು!

- ಹೋಳಿಯ ಸಲುವಾಗಿ ಜನಹಿತದಲ್ಲಿ ಗುಂಡನ ಪುಕ್ಕಟೆ ಸಲಹೆ... 'ನೆರೆಮನೆಯವಳ ಜೊತೆ ಹೋಳಿ ಆಡುವಾಗ ಜಾಗ್ರತೆವಹಿಸಿ. ಇಲ್ಲವಾದರೆ ಬಣ್ಣವಿಲ್ಲದೆಯೇ ಆಕೆ ಮತ್ತು ನಿಮ್ಮ ಪತ್ನಿ ನಿಮ್ಮ ಕೆನ್ನೆ ಕೆಂಪಗಾಗಿಸಬಲ್ಲರು'!

- ದಂಪತಿಯ ಯಶಸ್ವಿ ವೈವಾಹಿಕ ಜೀವನದ ರಹಸ್ಯ ಗುಂಡನ ಮಾತಿನಲ್ಲಿ... ನಾವು ವಾರಕ್ಕೆ ಎರಡು ದಿನ ಹೊರಗಡೆ ತಿರುಗಾಟಕ್ಕಾಗಿ ಸಮಯ ಮೀಸಲಿಡುತ್ತೇವೆ. ಅಂದು ನಾವು ರೆಸ್ಟೋರೆಂಟ್‌ನಲ್ಲಿ ಕ್ಯಾಂಡಲ್ ಲೈಟ್ ಡಿನ್ನರ್ ಮಾಡುತ್ತೇವೆ. ಲಘು ಸಂಗೀತವನ್ನಾಲಿಸುತ್ತೇವೆ. ಡ್ಯಾನ್ಸ್ ಮಾಡಿ ಕುಣಿಯುತ್ತೇವೆ. ಆಕೆ ಪ್ರತಿ ಮಂಗಳವಾರ ಹೋಗುತ್ತಾಳೆ ಮತ್ತು ನಾನು ಪ್ರತಿ ಶುಕ್ರವಾರ!

- ಯಶಸ್ವೀ ವೈವಾಹಿಕ ಜೀವನಕ್ಕೆರಡು ಸೂತ್ರಗಳು... ಒಂದು ಗಂಡ ತಾನು ತಪ್ಪೆಸಗಿದಾಗ ಅದನ್ನು ಒಪ್ಪಿಕೊಳ್ಳಬೇಕು. ಎರಡು ಗಂಡ ತಾನು ಸರಿಯಿರುವಾಗ ತುಟಿಪಿಟಿಕ್ಕೆನ್ನದೆ ಸುಮ್ಮನಿರಬೇಕು!

- ಸಾಮಾನ್ಯವಾಗಿ ಪತ್ನಿಯಂದಿರು ಪತಿಗಿಂತ ದೀರ್ಘ ಕಾಲ ಬಾಳುತ್ತಾರೆ ಎನ್ನುವ ಮಾತನ್ನು ಒಪ್ಪುವ ಗುಂಡನದು, ಅವರಿಗೆ ಪತ್ನಿಯಿಲ್ಲದಿರುವುದೇ ಇದಕ್ಕೆ ಕಾರಣ ಎನ್ನುವುದು ತಾರ್ಕಿಕ ಸ್ಪಷ್ಟೀಕರಣ!

- ರಾತ್ರಿ ಸುಸ್ತಾಗಿ ಕೆಲಸದಿಂದ ಮನೆಗೆ ಬರುತ್ತಲೇ ಪತ್ನಿ ಕಿರಿಕಿರಿ ಆರಂಭಿಸಿದಾಗ ಗುಂಡ ಹೇಳಿದ, 'ನಾನು ತುಂಬಾ ಸುಸ್ತಾಗಿದ್ದೇನೆ, ಸ್ವಲ್ಪ ಫ್ರೆಶ್ ಆಗಲು ಬಿಡು ಕಣೆ'. ಅದಕ್ಕೆ ಪತ್ನಿ, 'ರೀ ನಾನೂ ಫ್ರೆಶ್ ಆಗಬೇಕು ತಾನೇ? ಗೃಹಕೃತ್ಯದ ಕೆಲಸಗಳಿಂದ ಸುಸ್ತಾಗಿ ನೀವು ಬರುವುದನ್ನೇ ಕಾಯಿತ್ತಿದ್ದೆ ಕಣ್ರೀ ಫ್ರೆಶ್ ಆಗಲು!

- ಎಕ್ಸ್‌ಪ್ರೆಸ್ ಹೈವೆಯಲ್ಲಿ ಪ್ರತಿ ಗಂಟೆಗೆ 120 ಕಿ.ಮೀ. ವೇಗದಲ್ಲಿ ಕಾರು ಓಡಿಸುತ್ತಿದ್ದ ಗುಂಡನಿಗೆ ರಸ್ತೆಯ ಬದಿಯಲ್ಲೊಂದು ಸೂಚನಾಫಲಕ ಕಂಡಿತು. ನಿಮ್ಮ ಪತ್ನಿ ಮನೆಯಲ್ಲಿ ಕಾಯುತ್ತಿದ್ದಾಳೆ. ತಕ್ಷಣವೇ ಸರಕ್ಕೆಂದು ಗುಂಡನ ಕಾರಿನ ವೇಗ ಪ್ರತಿ ಗಂಟೆಗೆ 60 ಕಿ.ಮೀ. ಗಿಳಿಯಿತು.

ಸಂಗ್ರಹ: **ರಮಣ್ ಶೆಟ್ಟಿ ರೆಂಜಾಳ್,** ಮುಂಬೈ

